ಶಿಕಾರಿಪುರ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ

೬೬೨ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಯಾತ ನೀರಾವರಿ ಯೋಜನೆಯು ಮೇರೆಗೆ ಸರಕಾರದವರು ಕೈಗೊಳ್ಳಲು ಗುರುತಿಸಿರುವ ಸ್ಥಳಗಳೆಷ್ಟು ?

ಆ) ಈ ವರ್ಷ ಯೋಜನೆಯಂತೆ ಯಾವುದಾದರೂ ಕೆಲಸ ಕೈಗೊಳ್ಳಲು ತೀರ್ಮಾನಿಸಿದ್ದಾರೆಯೆ?

ಇ) ಬರಗಾಲ ಪೀಡಿತ ಪ್ರದೇಶವಾದ ಉಡುಗಣಿ ತಾಳಗುಂದ ಹೋಬಳಿಯಲ್ಲಿ ಯಾತ ನೀರಾವರಿ ಯೋಜನೆ ಕೈಗೊಳ್ಳುವ ಬಗ್ಗೆ ಸರಕಾರದವರು ಯೋಜಿಸಿದ್ದಾರೆಯೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—(ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).

ಅ) ಯಾವುವು ಇಲ್ಲ.

ಆ) ಇಲ್ಲ.

ಇ) ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ. ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರು ಸರಿಯಾದ ಮಾಹಿತಿಯನ್ನು ಒದಗಿಸುತ್ತಿಲ್ಲ. ಏತಕ್ಕೆಂದರೆ ಅಂಜನಾಪುರ ಮತ್ತು ಸನ್ಯಾಸಿ ಕೊಪ್ಪ ಬಗ್ಗೆ ಸರ್ವೆ ಆಗಿ ಎಲ್ಲಾ ರಿಕಾರ್ಡ್ಸ್ ಸಿದ್ಧವಾಗಿದೆ ಇದರ ಬಗ್ಗೆ ನಾನು ಸಾಕಷ್ಟು ಸಾರಿ ಪತ್ರ ವ್ಯವಹಾರ ಕೂಡ ಮಾಡಿದ್ದೇವೆ, ಕೆರೆ ಹಳ್ಳಿದಲ್ಲಿ ವಾಟರ್ ರಿಸೋರ್ಸಸ್ ಬಗ್ಗೆ ತಜ್ಞರು ಒಳ್ಳೆಯ ಅಭಿಪ್ರಾಯವನ್ನು ಕೊಟ್ಟಿದ್ದಾರೆ.....

ಅಧ್ಯಕ್ಷರು.—ಸನ್ಯಾಸಿ ಕೊಪ್ಪ ಆದುದರಿಂದ ಅದು ಸಚಿವರ ಗಮನಕ್ಕೆ ಬಾರದೇ ಇರಬಹುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇದರ ಬಗ್ಗೆ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರಿಂದ ಸರ್ವೆ ಮಾಡಿಸಿ ಅಲ್ಲಿ ಎಷ್ಟು ನೀರು ಸಿಗುತ್ತದೆ ಎನ್ನುವ ಬಗ್ಗೆ ತನಿಖೆ ಮಾಡಿಸಿ ಅವರಿಂದ ವರದಿ ಬಂದ ತಕ್ಷಣ ಅಲ್ಲಿ ಸಾಕಷ್ಟು ನೀರು ಸಿಗುತ್ತದೆಂದು ಹೇಳುವುದಾದರೆ ಆ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಉಡುಗಣಿ ತಾಳಗುಂದ ಹೋಬಳಿಯ ಬಗ್ಗೆ ಈಗಾಗಲೇ ತಜ್ಞರು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಲ್ಲಿ ಲಿಫ್ಟ್ ಇರಿಗೇಷನ್ ಬಗ್ಗೆ ಹಿಂದಿನ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಲಿಫ್ಟ್ ಇರಿಗೇಷನ್ನು ಅನುಷ್ಠಾನಕ್ಕೇ ತಂದಿದ್ದಾರೆ. ಆದುದರಿಂದ ಅದನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡುವ ಬಗ್ಗೆ ತಮ್ಮ ನಿಲುವು ಏನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಶಿವಮೊಗ್ಗ, ಶಿವಪುರ ಇಂಥಾ ಸ್ಥಳಗಳಲ್ಲಿ ಬೋರ್‌ವೆಲ್ಸ್ ಗಳನ್ನು ಹಾಕಿ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಪ್ರಯತ್ನ ಪಟ್ಟರು. ಒಂದು ಕಡೆ ಮಾತ್ರ ನೀರು ಬಂದಿತು, ಅದು ಚಾಸ್ತಿ ಬಾರದೇ ಇದ್ದುದರಿಂದ ಅದನ್ನು ಶಾಲ ಮಕ್ಕಳು ಕುಡಿಯಲು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದಾರೆ. ಆದುದರಿಂದ ನೀರು ಹೆಚ್ಚಿಗೆ ಬಂದರೆ ಅದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಮ್ಮಲ್ಲಿ ಸಾಕಷ್ಟು ನೀರು ಬರುತ್ತದೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ, ಆದುದರಿಂದ ಯಾರೋ ತಪ್ಪಾಗಿ ಸರಿಯಾದ ಮಾಹಿತಿಯನ್ನು ಒದಗಿಸಿಲ್ಲವೆಂದು ಕಾಣುತ್ತದೆ. ಆದುದರಿಂದ ದಯವಾಡಿ ಇನ್ನೊಮ್ಮೆ ಸರಿಯಾಗಿ ಪರಿಶೀಲನೆ ಮಾಡಿ ನೋಡಿ, ಇದನ್ನು ಅಲ್ಲಿ ಕಾರ್ಯ ರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಜ್ಞರಿಂದ ಅಭಿಪ್ರಾಯ ಪಡೆದು ಸಾಕಷ್ಟು ನೀರು ಸಿಗುತ್ತದೆಂದು ಗೊತ್ತಾದರೆ ಏತ ನೀರಾವರಿ ಯೋಜನೆಯನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಎಂ. ರಘುಪತಿ.—ಈ ಪ್ರಶ್ನೆ ನನಗೆ ಈಗ ತಾನೇ ಬಂದಿರುವುದರಿಂದ ಅದಕ್ಕೆ ಉತ್ತರ ಬಂದ ತಕ್ಷಣ ಹೇಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಮುಂದಿನ ಪ್ರಶ್ನೆ, ೮೫. ಶ್ರೀ ಪಿ. ರಾಮ್ ದೇವ್ ರವರಿಂದ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈ ಪ್ರಶ್ನೆಗೆ ಇನ್ನೂ ವಿವರಗಳು ದೊರೆತಿಲ್ಲವಾದುದರಿಂದ ಈ ಪ್ರಶ್ನೆಯನ್ನು ಮುಂದೊಂದು ದಿವಸ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಈ ಪ್ರಶ್ನೆಯನ್ನು ಇನ್ನೊಂದು ಸಾರಿ ತೆಗೆದುಕೊಳ್ಳೋಣ.

ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ನಿರ್ಮಿಸುವುದು

೧೩೨. ಶ್ರೀ ಕೆ. ಜಿ. ತ್ರಿನಿವಾಸಮೂರ್ತಿ (ಸಾತನೂರು).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ ?

ಅ) ಸಾತನೂರು ವಿಧಾನ ಸಭಾ ಕ್ಷೇತ್ರದಲ್ಲಿ ಯಾವುದಾದರೂ ಸರ್ಕಾರಿ ಕೈಗಾರಿಕೆ ಇದೆಯೇ ;

ಆ) ಹಾಗಿಲ್ಲದಿದ್ದಲ್ಲಿ ಅವನ್ನು ಈ ಸಾರಿ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ ;

ಇ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು)

ಅ) ಇಲ್ಲ

ಆ) ಸಧ್ಯಕ್ಕೆ ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಕೆ.ಜಿ. ಶ್ರೀನಿವಾಸಮೂರ್ತಿ (ಸಾತನೂರು).—ನಮ್ಮ ಸಾತನೂರು ಕ್ಷೇತ್ರವನ್ನು ಕಳಿದ ೨೫ ವರ್ಷಗಳಿಂದ ತುಂಬಾ ನೆಗ್ಲೆಟ್ ಮಾಡಿಕೊಂಡು ಬಂದಿದ್ದಾರೆ. ಈ ಕ್ಷೇತ್ರದಲ್ಲಿ ಯಾವುದೇ ದೊಡ್ಡ ನೀರಾವರಿ ಜಲಾಶಗಳಾಗಲೀ ಇಲ್ಲ, ಯಾವುದೇ ದೊಡ್ಡ ಕೈಗಾರಿಕೆಗಳು ಇಲ್ಲಿಯವರೆಗೂ ಆಗಿಲ್ಲ. ಅಲ್ಲಿ ಕೂಡ ಸಾಕಷ್ಟು ಜನ ವಿದ್ಯಾವಂತರಿದ್ದಾರೆ, ಆದುದರಿಂದ ನಮ್ಮ ಕ್ಷೇತ್ರದಲ್ಲೂ ಸಹ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆಂದು ನಾವು ಅನೇಕ ಸಾರಿ ಮನವಿ ಮಾಡಿಕೊಂಡಿದ್ದೇವೆ ಆದರೆ ಇದುವರೆಗೂ ಯಾವುದೇ ಕೈಗಾರಿಕೆಯನ್ನು ಪ್ರಾರಂಭ ಮಾಡಿಲ್ಲ ಆದುದರಿಂದ ಅಲ್ಲಿಗೆ ರೇಷ್ಮೆ ಕೈಗಾರಿಕೆಯನ್ನು ಅಥವಾ ಇನ್ನು ಯಾವುದೇ ಸಣ್ಣ ಕೈಗಾರಿಕೆಯನ್ನಾದರೂ ಪ್ರಾರಂಭ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಖಾಸಗಿಯವರು ಎಷ್ಟೇ ಜನ ಯಾವುದೇ ಕೈಗಾರಿಕೆಗಳನ್ನು ಮಾಡುತ್ತೇವೆಂದು ಮುಂದೆ ಬಂದರೆ ಅಂಥವರಿಗೆ ನಮ್ಮ ಸರ್ಕಾರ ಸಹಾಯವನ್ನು ಕೊಡುತ್ತದೆ. ನಿಮ್ಮ ಕ್ಷೇತ್ರ ಕೈಗಾರಿಕೆಯಲ್ಲಿ ಹಿಂದುಳಿದ ಕ್ಷೇತ್ರವಾಗಿದೆ, ಅಲ್ಲಿಗೆ ಸರ್ಕಾರದಿಂದ ಯಾವುದೇ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಸಧ್ಯಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದೇವೆ. ಆದರೆ ಬೇರೆ ಯಾರಾದರೂ ಖಾಸಗಿಯವರು ಮುಂದೆ ಬಂದು ಕೈಗಾರಿಕೆಗಳನ್ನು ನಡೆಸುವುದಾದರೆ ಅವರಿಗೆ ಎಲ್ಲಾ ರೀತಿಯ ಸಹಾಯವನ್ನು ಒದಗಿಸಿ ಕೊಡುತ್ತೇವೆ. ಸರ್ಕಾರ ಸಹ ಅಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡುವ ಬಗ್ಗೆ ಆಲೋಚನೆ ಮಾಡುತ್ತಿದೆ.